ಮತ್ತು ಮೂರನೆಯ ಗುಂಡೂ ಅದೇ ಆಸುಪಾಸಿನಲ್ಲಿ ಬೀಳಲು ಸಾಧ್ಯವಾ... ಅದೂ ಒಬ್ಬ ಅಮೆಚೂರ್ ಶೂಟರ್‌ನಿಂದ?"

"ಮೂರನೆಯದು?" ಎಂದ ಭೂಷಣ್ ಫೋಟೊಗಳ ಮಧ್ಯೆ ಇದ್ದ ಗನ್‌ನ ಫೋಟೊ ತೆಗೆದು ಅಮಿತಾಗೆ ತೋರಿಸುತ್ತಾ, "ಈ ಗನ್‌ನಿಂದ ಶೂಟ್ ಮಾಡಿದ ನಂದಿನಿಯ ಕೈ ಬೆರಳುಗಳಾಗಲೀ ಮಣಿಕಟ್ಟಾಗಲೀ... ಗನ್ ವಾಪಸ್ ಹೊಡೆಯೋ ರಿಕಾಯ್ಲ್‌ನ ಫೋರ್ಸ್‌ನಿಂದಾಗುವ ಗಾಯವಾಗಲೀ ಅಥವಾ ಕನಿಷ್ಠ ಊತವಾಗಲೀ ಇಲ್ಲ..." ಹೇಳಿದ.

ಅಮಿತಾ ಒಮ್ಮೆ ಆಲೋಚಿಸಿ, "ಅಂದರೆ..." ಎಂದಳು. ಅವಳ ದನಿಯಲ್ಲಿ ಬೇಸರ ಅಡಗಿತ್ತು.

ಭೂಷಣ್ ಉತ್ತರ ಹೇಳಲಿಲ್ಲ. ಆ ಕ್ಷಣಕ್ಕೆ ಅವನ ಬಳಿ ಉತ್ತರ ಇರಲಿಲ್ಲ. ಆದರೆ, ಅವನ ಮುಂದಿದ್ದ ಸಾಕ್ಷಿಗಳು, ನಂದಿನಿಯ ತಪ್ಪೊಪ್ಪಿಗೆ ಇವೆಲ್ಲವೂ ಅವಳನ್ನು ಅರೆಸ್ಟ್ ಮಾಡಿ ಕೋರ್ಟಿಗೆ ಹಾಜರು ಮಾಡಬೇಕಾದಂತಹ ಪರಿಸ್ಥಿತಿ ತಂದೊಡ್ಡಿದ್ದವು.

"ಸರ್, ಬಾಳಿಗಾ ಇಷ್ಟು ಕ್ರೂರವಾಗಿ ಸತ್ತಿದ್ದಾನೆ ಎಂದು ತಿಳಿದಮೇಲೂ ಅವರ ಕಡೆಯವರಾಗಲೀ ಅಥವಾ ಸ್ನೇಹಿತರಾಗಲೀ ಬರದೇ ಇರುವುದು ಆಶ್ಚರ್ಯ... ಇಬ್ಬರ ಕಾಲ್ ರೆಕಾರ್ಡ್‌ಗಳಲ್ಲಿಯೂ ಹೆಚ್ಚಿನ ವಿವರಗಳು ಸಿಗಲಿಲ್ಲ..."

ಭೂಷಣನ ಗಮನ ಕಾನ್‌ಸ್ಟೆಬಲ್ ಕರೆತಂದಿದ್ದ ಮಂಗಳಾ ಮೇಲೆಯೇ ಇತ್ತು.

"ಸರ್, ನಂಗೆ ಏನೂ ಗೊತ್ತಿಲ್ಲ... ನಾನು ಬೆಳಗ್ಗೆ ಎಂಟಕ್ಕೆ ತರಕಾರಿ ತರಕ್ಕೆ ಮಾರ್ಕೆಟ್‌ಗೆ ಹೋಗಿದ್ದೆ. ವಾಪಸ್ ಬರುವಷ್ಟರಲ್ಲಿ..." ಎಂದ ಅವಳ ಮಾತುಗಳನ್ನು ತಡೆಯುತ್ತಾ ಭೂಷಣ್.

"ಇದೇ ಗಿಣಿಪಾಠ ಕೇಳಲು ಕರೆಸಿಲ್ಲ. ನಾವು ಕೇಳಿದ ಪ್ರಶ್ನೆಗೆ ಮಾತ್ರ ಉತ್ತರ ಕೊಡು. ಎಷ್ಟು ವರ್ಷದಿಂದ ಅಲ್ಲಿ ಕೆಲಸ ಮಾಡ್ತಾಯಿದೀಯಾ?"

"ಒಂದು ವರ್ಷದಿಂದ ಸರ್... ಅದೇ ನಂದಿನಿ ಮೇಡಂ ಮದುವೆ ಮಾಡಿಕೊಂಡರು, ಆಗಲಿಂದ ಅವರ ಜೊತೆಲೆ ಇದ್ದೀನಿ... ಹಂಸಿನಿನ ನೋಡಿಕೊಳ್ಳೋದು, ಅವಳಿಗೆ ಸ್ನಾನ ಬಟ್ಟೆ, ಊಟ ತಿಂಡಿ ಎಲ್ಲಾ ನಾನೇ ಮಾಡೋದು..."

"ಗಂಡಹೆಂಡತಿ ಯಾವಾಗಲೂ ಜಗಳ ಆಡ್ತಾ ಇದ್ರಾ? ಯಾವುದಕ್ಕೆ ಜಗಳ ಆಗುತ್ತಿತ್ತು?"

"ಅದೆಲ್ಲ ನಂಗೆ ಎಲ್ಲಿ ಗೊತ್ತಾಗುತ್ತೆ ಸಾರ್, ನಾನಾಯಿತು ನನ್ನ ಕೆಲಸ ಆಯ್ತು. ಮುಂಚೆ ಎಲ್ಲಾ ಚೆನ್ನಾಗಿಯೇ ಇದ್ರು. ಇತ್ತೀಚೆಗೆ ಸುಮಾರು ಒಂದು ತಿಂಗಳಿನಿಂದ ಜಗಳ..."

ಭೂಷಣ್ ಕೊಂಚ ಅಲರ್ಟ್ ಆದ. ಹೆಚ್ಚು ವಯಸ್ಸಿನ ಅಂತರದ ಬಹುತೇಕ ಮದುವೆಗಳಲ್ಲಿ ವಿವಾಹೇತರ ಸಂಬಂಧದ ಒಂದು ಕಾರಣ ಇರುತ್ತದೆ ಅನ್ನುವುದು ತಿಳಿದಿತ್ತು. ಈ ಸಂದರ್ಭದಲ್ಲಿಯೂ ಅದೇ ಕಾರಣ ಏನಾದರೂ ಇದೆಯಾ ಎಂದು ತಿಳಿಯಬೇಕಿತ್ತು.

"ಬಾಳಿಗಾ ಸಾಹೇಬರಿಗೆ ಮಗು ಬೇಕಿತ್ತು. ಆದ್ರೆ, ನಂದಿನಿ ಮೇಡಂ ಮಗು ಆದ್ರೆ ತಂಗಿ ಬಗ್ಗೆ ಅಸಡ್ಡೆ ಬರುತ್ತೆ ಅಂತ ಬೇಡ ಅಂತಿದ್ರು. ಅದೇ ಜಗಳ ಸರ್..."

"ಅದೊಂದೆನಾ ಅಥವಾ ಬೇರೆ ಹಣಕಾಸು ವಿಚಾರ ಏನಾದರೂ?"

"ಅದೆಲ್ಲಾ ನನಗೆಲ್ಲಿ ಗೊತ್ತಾಗುತ್ತೆ, ಸರ್. ಹಾಗೇನೂ ಇಲ್ಲ ಅಂತ ಅನಿಸುತ್ತೆ. ಆದ್ರೆ, ಯಾವ ಹುತ್ತದಲ್ಲಿ ಯಾವ ಹಾವು ಇರುತ್ತೋ... ಅದು ಕೆರೆ ಹಾವೋ ವಿಷದಹಾವೋ ಯಾರಿಗೆ ಗೊತ್ತು. ನನ್ನ ಕೆಲಸ ಮಾಡಿಕೊಂಡು ತಿಂಗಳ ಸಂಬಳ ಎಣಿಸಿಕೊಳ್ಳುತ್ತಿದ್ದೆ."

ಮಂಗಳಾ ಹೋದ ದಿಕ್ಕಿನಲ್ಲೇ ನೋಡುತ್ತಾ ಭೂಷಣ್ ಹೇಳಿದ:

"ಇವಳ ಮಾತುಗಳು, ಇವಳ ನಡೆ ನುಡಿ ಅನುಮಾನ ತರುತ್ತಿವೆ. ಎಲ್ಲಾ ಪ್ರಿಪೇರ್ ಆಗಿ ಬಂದಂತಿದೆ..."

"ಬಾಳಿಗಾಗೆ ಯಾರೂ ಇಲ್ಲ. ಕೋಟ್ಯಂತರ ರೂಪಾಯಿಯ ಆಸ್ತಿಯ ಒಡೆಯ. ಬಾಳಿಗಾ ಕೊಲೆ ಮಾಡಿ, ಅದನ್ನು ನಂದಿನಿಯ ಮೇಲೆ ಹಾಕಿ ಅವಳನ್ನು ಜೈಲಿಗೆ ಕಳುಹಿಸಿದರೆ, ಆಸ್ತಿ ಎಲ್ಲಾ ಹಂಸಿನಿಯದ್ದೇ. ಹಂಸಿನಿಯ ಕಾಲುಗಳು ಸರಿ ಇಲ್ಲ. ಕಳೆದ ಒಂದು ವರ್ಷದಿಂದ ಮಂಗಳಾ ಮೇಲೆ ಡಿಪೆಂಡ್ ಆಗಿದ್ದಾಳೆ. ಆದ್ದರಿಂದ, ಮಂಗಳಾ ಇಡೀ ಆಸ್ತಿಯ ಒಡತಿ..." ಭೂಷಣ್ ತಲೆಯೆತ್ತಿ ಅಮಿತಾ ಕಡೆ ನೋಡಿದ. ಆಕೆ ಕ್ರೈಂ ಬ್ರಾಂಚ್‌ನಲ್ಲಿ ಈಗ ಹೆಜ್ಜೆಯಿಡುತ್ತಾ ಕಲಿಯುತ್ತಿದ್ದವಳು. ಆಕೆಯ ಈ ತರ್ಕ